# ಕಿಶೋರಿ ಕ್ಲಬ್

## ಅರಿವಿಲ್ಲದ ಅನಾರೋಗ್ಯಕರ ವರ್ತನೆಯಿಂದ ಆರೋಗ್ಯಕರ ಪರಿವರ್ತನೆಯೆಡೆಗೆ

**- ಕಾರ್ತಿಕ್ ಕೆ , ಐಟಿ ಫಾರ್ ಚೇಂಜ್**

## ಹಿನ್ನೆಲೆ

ಕಿಶೋರಾವಸ್ಥೆ ಅಥವಾ ಹದಿಹರೆಯ ಜಗತ್ತಿನಲ್ಲಿ ಪ್ರತಿಯೊಂದು ಮಗುವಿನಲ್ಲಿ ಸರ್ವೆ ಸಾಮಾನ್ಯವಾಗಿ ಗುರುತಿಸ್ಪಡುವ ವಯಸ್ಸಾದರೂ ಅತಿ ಹೆಚ್ಚು ಕಡೆಗಣನೆಗೆ ಒಳಗಾಗುವ ವಯಸ್ಸು. ಬಾಲ್ಯಾವಸ್ಥೆ ಹಾಗು ಪ್ರೌಢಾವಸ್ಥೆಯ ನಡುವಲ್ಲಿ ಎಲ್ಲರನ್ನೂ ಹಲವು ಗೊಂದಲಗಳಿಗೆ ದೂಡುವ ವಯಸ್ಸಿದು. ಯಾಕೆಂದರೆ ತನ್ನಲ್ಲಿ ಆಗುತ್ತಿರುವ ದೈಹಿಕ, ಮಾನಸಿಕ, ಬೌದ್ಧಿಕ ಬದಲಾವಣೆಗಳು ಏನೇನು ಹಾಗು ಇವೆಲ್ಲಾ ಯಾಕೆ ಆಗುತ್ತಿವೆ ಎನ್ನುವ ಗೊಂದಲಗಳು ಹೆಣ್ಣು ಮತ್ತು ಗಂಡುಮಕ್ಕಳಿಗೆ ಆಗುವುದು ಒಂದು ಕಡೆ. ಅದೇ ಸಮಯದಲ್ಲಿ ಇವೆಲ್ಲವನ್ನೂ ಸಾವಕಾಶವಾಗಿ ತಿಳಿದುಕೊಂಡು ಅವರನ್ನು ಹೇಗೆ ಮಾತನಾಡಿಸುವುದು, ಅವರೊಡನೆ ಹೇಗೆ ವ್ಯವಹರಿಸುವುದು ಎನ್ನುವುದು ಹದಿಹರೆಯದವರ ತಾಯ್ತಂದೆಯರಿಗೆ ಗೊಂದಲವಾಗಬಹುದು. ಅವರಷ್ಟೇ ಅಲ್ಲ ಹದಿಹರೆಯದವರೊಡನೆ ವ್ಯವಹರಿಸುವ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಸ್ಥಿತಿಯೂ ಹೀಗೆ ಇದೆ ಎಂದರೆ ಅದು ಅತಿಶಯೋಕ್ತಿಯಲ್ಲ.

ಇಲ್ಲಿ ವಿಷಯ ಜ್ಞಾನದ ಅಭಾವವೂ ಇದೆ, ಜೊತೆಗೆ ತೆಗೆದುಕೊಳ್ಳಬೇಕಿರುವ ನಿರ್ಧಾರಗಳ ಬಗ್ಗೆ ಬಹಳಷ್ಟು ಯೋಚಿಸಬೇಕಿರುವ ಜಾವಾಬ್ದಾರಿಯೂ ಇದೆ. ಹದಿಹರೆಯದಲ್ಲಿ ಮಗುವಿಗೆ ಸಿಗುವ ಮಾರ್ಗದರ್ಶನ ಅವರ ಬದುಕನ್ನೇ ಬದಲಿಸುವ ಸಾಮರ್ಥ್ಯ ಹೊಂದಿದೆ. ಅವರು ಮುಂದೆ ತಮ್ಮ ಸುತ್ತಮುತ್ತಲ ಪರಿಸರವನ್ನು ಚೆನ್ನಾಗಿ ಅರಿತುಕೊಂಡು, ತಮ್ಮ ಮನೆಯ ಪರಿಸ್ಥಿತಿಗಳಿಗೆ ಸ್ಪಂದಿಸುವ ಜವಾಬ್ದಾರಿಯುತ ವಯಸ್ಕರಾಗುತ್ತಾರೆ ಹಾಗು ಸಶಕ್ತ ಜೀವನವನ್ನು ಕಟ್ಟಿಕೊಳ್ಳುತ್ತಾರೆ. ಆದ್ದರಿಂದ ಅವರೊಂದಿಗೆ ಉಪಾಯದಿಂದ ಮಾತನಾಡುತ್ತಾ ಅವರಿಗಿರುವ ಹತ್ತು ಹಲವು ಪ್ರಶ್ನೆಗಳು, ಗೊಂದಲಗಳು, ಯೋಚನೆಗಳ ಬಗ್ಗೆ ತಿಳಿದುಕೊಳ್ಳಬೇಕಿದೆ. ಮತ್ತು ಅವುಗಳಿಗೆ ಸಮಂಜಸವಾದ ರೀತಿಯಲ್ಲಿ ಸ್ಪಂದಿಸಬೇಕಿದೆ. ಈ ಹೆಜ್ಜೆ ಸೂಕ್ಷ್ಮವಾದದ್ದು ಹಾಗು ಅತ್ಯವಶ್ಯಕವೂ ಹೌದು. ಜೊತೆಗೆ ಇದೊಂದು ಕೌಶಲವೂ ಹೌದು.

ಹದಿಹರೆಯದಲ್ಲಿ ಕಿಶೋರ/ಕಿಶೋರಿಯರು ತಮ್ಮ ಗುರುತು ಮತ್ತು ಮೌಲ್ಯಗಳನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಯಲ್ಲಿರುತ್ತಾರೆ. ಅವರೊಂದಿಗೆ ನಮ್ಮನ್ನು ನಾವು ತೊಡಗಿಸಿಕೊಳ್ಳುವುದು, ಸಕಾರಾತ್ಮಕ ಮಾದರಿಗಳು, ಮಾರ್ಗದರ್ಶನ ಮತ್ತು ವೈವಿಧ್ಯಮಯ ಅನುಭವಗಳಿಗೆ ಒಡ್ಡಿಕೊಳ್ಳುವುದನ್ನು ಒದಗಿಸಲು ಸಹಾಯ ಮಾಡುತ್ತದೆ, ಅವರ ವೈಯಕ್ತಿಕ ಮೌಲ್ಯಗಳು ಮತ್ತು ಜೀವನದ ಆಯ್ಕೆಗಳ ಮೇಲೆ ಪ್ರಭಾವ ಬೀರುತ್ತದೆ. ತಮ್ಮ ದೈಹಿಕ ಮತ್ತು ಮಾನಸಿಕ ಯೋಗಕ್ಷೇಮದ ಬಗ್ಗೆ ಹಲವು ಸವಾಲುಗಳನ್ನು ಎದುರಿಸುತ್ತಿರಬಹುದು. ಅವರೊಂದಿಗೆ ಮಾತನಾಡುವುದರಿಂದ ಆರೋಗ್ಯ-ಸಂಬಂಧಿತ ವಿಷಯಗಳ ಉದಾಹರಣೆಗೆ ಸಮತೋಲನ ಆಹಾರ, ಪೌಷ್ಟಿಕಾಂಶಗಳು, ಸಂತಾನೋತ್ಪತ್ತಿ, ಮಾನಸಿಕ ಆರೋಗ್ಯ, ಮಾದಕ ದ್ರವ್ಯ ಸೇವನೆ(ವ್ಯಸನ), ಇತ್ಯಾದಿಗಳಂತಹ

ವಿಷಯಗಳನ್ನು ಮಾತನಾಡಲು ಅನುವು ಮಾಡಿಕೊಡುತ್ತದೆ. ಈ ಹಂತದಲ್ಲಿ ಹಲವರಿಗೆ ಅವರ ಕಲಿಕೆ ಮತ್ತು ಕೌಶಲ್ಯ ಅಭಿವೃದ್ಧಿಯ ಬಗ್ಗೆ ಮಾಹಿತಿ ಹಾಗು ಮಾರ್ಗದರ್ಶನ ಬೇಕಿದ್ದು, ಅವರ ಭವಿಷ್ಯದ ಯಶಸ್ಸಿಗೆ ನಿರ್ಣಾಯಕವಾಗಿರುವ ಶಿಕ್ಷಣ, ವೃತ್ತಿಪರ ತರಬೇತಿ ಮತ್ತು ಜೀವನ ಕೌಶಲ್ಯಗಳನ್ನು ಕಲಿಯುವುದು ಮುಖ್ಯ.

ಕಲ್ಯಾಣ ಕರ್ನಾಟಕ ಅಂದರೆ ಹೈದರಾಬಾದ್ ಕರ್ನಾಟಕ ಪ್ರಾಂತ್ಯವು ಕರ್ನಾಟಕದ ಈಶಾನ್ಯ ಭಾಗದಲ್ಲಿದ್ದು ಇದರಲ್ಲಿ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ ಹಾಗು ಕೊಪ್ಪಳ ಜಿಲ್ಲೆಗಳಿವೆ. ಈ ಭಾಗವು ಕರ್ನಾಟಕದ ಇತಿಹಾಸದಲ್ಲಿ ವಿಶಿಷ್ಟವಾದ ಸ್ಥಾನವನ್ನು ಹೊಂದಿದ್ದು ನಾಡು ನುಡಿಗೆ ನೀಡಿರುವ ಕೊಡುಗೆ ಅಪಾರವಾದದ್ದು. "ಕಲ್ಯಾಣ ಕರ್ನಾಟಕ" ಎಂಬ ಹೆಸರು ಚಾಲುಕ್ಯರಿಂದ (ಕಲ್ಯಾಣಿ ಚಾಲುಕ್ಯರು) ಬಂದಿದೆ . ಅದು ಆಗಿನ ಕಾಲದಲ್ಲಿ ಶರಣ ಚಳುವಳಿ ಹಾಗು ವಚನ ಸಾಹಿತ್ಯ ರಚನೆಯ ಕೇಂದ್ರಬಿಂದು ಆಗಿತ್ತು. ಆದರೆ ಕರ್ನಾಟಕದ ಉಳಿದ ಜಿಲ್ಲೆಗಳಿಗೆ ಹೋಲಿಸಿದರೆ ಇಲ್ಲಿರುವ ಜಿಲ್ಲೆಗಳು ಅಭಿವೃದ್ಧಿ ಸೂಚ್ಯಂಕದ ಆಧಾರದ ಮೇಲೆ ಹಿಂದುಳಿದಿವೆ[1].

ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ರಚನೆ ಮತ್ತು ಪ್ರಾದೇಶಿಕ ಅಸಮಾನತೆಗಳನ್ನು ಪರಿಹರಿಸುವ ಗುರಿಯನ್ನು ಹೊಂದಿರುವ 371 (ಜೆ) ನಂತಹ ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವು ಕಲ್ಯಾಣ ಕರ್ನಾಟಕದಲ್ಲಿ ಹಿಂದುಳಿದಿರುವಿಕೆಯನ್ನು ತಗ್ಗಿಸುವ ಕ್ರಮಗಳಾಗಿವೆ[2].

ಮೈಸೂರು ಜಿಲ್ಲೆ ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕದ ಸಾಂಸ್ಕೃತಿಕ ನಗರಿಯೆಂದೇ ಪ್ರಸಿದ್ಧವಾಗಿದೆ. ನವರಾತ್ರಿ ಸಮಯದಲ್ಲಿ ಇಲ್ಲಿ ನಡೆಯುವ ಸಾಂಪ್ರದಾಯಿಕ ದಸರಾದ ವೈಭವೋಕ್ತ ಆಚರಣೆಯಿಂದಾಗಿ ಪ್ರಪಂಚದಾದ್ಯಂತ ಹೆಸರುವಾಸಿಯಾಗಿದೆ. ಸಮೃದ್ಧವಾದ ಕಾಡು, ಪುರಾತತ್ವ, ವಾಸ್ತುಶಿಲ್ಪ ಪರಂಪರೆಗಳನ್ನು ಹೊಂದಿದೆ. ಆದರೆ ಜಿಲ್ಲೆಯ ಹುಣಸೂರು ಹಾಗು ಹೆಗ್ಗಡದೇವನಕೋಟೆ ತಾಲ್ಲೂಕುಗಳು ಹಿಂದುಳಿದ ಭಾಗಗಳೆಂದು ಗುರುತಿಸಲ್ಪಟ್ಟಿವೆ.

ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಹಲವಾರು ಪ್ರಯತ್ನಗಳನ್ನು ಸರ್ಕಾರ ಮಾಡುತ್ತಲೇ ಇದೆ. ಪ್ರೊ. ಡಾ. ನಂಜುಡಪ್ಪ ಸಮಿತಿಯ ವರದಿಯ ಆಧಾರದ ಮೇಲೆ ಹಿಂದುಳಿದ ತಾಲ್ಲೂಕುಗಳನ್ನು ಗುರುತಿಸಿ[3] ಅವುಗಳಲ್ಲಿ ಹೆಚ್ಚೆಚ್ಚು ಬೆಳವಣಿಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕಿಶೋರಿ ಸಬಲೀಕರಣಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಸಮಾನತೆಗಳನ್ನು ಕಡಿಮೆ ಮಾಡುವತ್ತ ಐ.ಟಿ ಫಾರ್ ಚೇಂಜ್ ಸಂಸ್ಥೆಯೂ ಸಹ ಈ ನಿಟ್ಟಿನಲ್ಲಿ ತನ್ನ ಕೈಜೋಡಿಸುತ್ತಿದೆ.

ಐ.ಟಿ.ಫಾರ್ ಚೇಂಜ್ ಸಂಸ್ಥೆ, ೨೦೦೦ದ ಇಸವಿಯಲ್ಲಿ ಆರಂಭವಾದ ಸರ್ಕಾರೇತರ ಸಂಸ್ಥೆ. ಇದರ ಮೂಲ ಉದ್ದೇಶ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳನ್ನು (ಐ.ಸಿ.ಟಿ) ಬಳಸಿಕೊಂಡು, ಸಮಾಜದ ಪ್ರಧಾನ ಕಾರ್ಯಕ್ಷೇತ್ರಗಳಲ್ಲಿ ಮೂಲೆಗುಂಪಾದವರೊಟ್ಟಿಗೆ ಕೆಲಸಮಾಡುವುದು. ಈ ಕ್ಷೇತ್ರಗಳಲ್ಲಿ ಶಿಕ್ಷಣ ಪ್ರಮುಖವಾದದ್ದು. ಶಾಲಾ ಹಂತ ಮತ್ತು ವಲಯ ಹಂತದ ಕಲಿಕೆ ಮತ್ತು ಬೋಧನೆಗೆ ಪೂರಕವಾದ ಐ.ಸಿ.ಟಿ ತಂತ್ರಜ್ಞಾನ ಅಳವಡಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಬೆಂಗಳೂರು ಹಾಗು ಮೈಸೂರಿನಲ್ಲಿ ಮಹಿಳಾ ಸಬಲೀಕರಣ, ಮಹಿಳೆಯರ ವಿರುದ್ಧದ ದೌರ್ಜನ್ಯದಂತಹ ಸೂಕ್ಷ್ಮ ಹಾಗು ಪ್ರಮುಖ ವಿಷಯಗಳ ಬಗ್ಗೆ ಸಾಕಷ್ಟು ವರ್ಷಗಳಿಂದ

1 Shiddalingaswami H, “Regional Disparities in Karnataka: A District Level Analysis of Growth and Development.”
2 Maradi, “Implementation of Article 371(J) Enhance the Economic and Education Status of the Kalyan- Karnataka Region.”
3 Hanagodimath, “Implementation of D. M. Nanjundappa Committee Recommendations for Redressal of Regional Imbalance.”

ಕೆಲಸ ಮಾಡುತ್ತಿದೆ. ಶಾಲಾ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ತಮ್ಮ ಸುತ್ತಲ ಪರಿಸರದ ಹಾಗೂ ಸಮಾಜದ ಓರೆಕೋರೆಗಳ ಪರಿಚಯವಾದರೆ ಮುಂದೆ ಅವರು ತಂತಮ್ಮ ಜೀವನಗಳಲ್ಲಿ ತಮ್ಮ ಆಕಾಂಕ್ಷೆಯ ವಿಷಯಗಳಲ್ಲಿ ಸಾಧನೆ ಮಾಡಲು ಅನುವಾಗುತ್ತದೆ ಎಂಬುದು ಸಂಸ್ಥೆಯ ನಂಬಿಕೆ.

## ಕಿಶೋರಿ ಕ್ಲಬ್‌ನ ಪರಿಚಯ

ಕಿಶೋರಿಯರಿಗೆ ತಮ್ಮ ಜೀವನದ ಮುಖ್ಯವಾದ ಹಂತದ ಬಗ್ಗೆ ತಿಳಿದುಕೊಳ್ಳಲು ಸ್ವಾಭಾವಿಕವಾಗಿಯೇ ಆಸಕ್ತಿ ಇರುತ್ತದೆ. ಆದರೆ ಅವರಿಗೆ ಬೇಕಿರುವ ಮಾಹಿತಿ ಸುಲಭವಾಗಿ ದೊರಕುವುದಿಲ್ಲ. ಸಾಮಾನ್ಯವಾಗಿ ಕಿಶೋರಿಯರು ಪ್ರತಿದಿನವೂ ತಮ್ಮ ವಿವಿಧ ಅಗತ್ಯತೆಗಳಿಗಾಗಿ ಅಂತರ್ಜಾಲವನ್ನು ಬಳಸುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಂತೂ ಅವರು ಹೆಚ್ಚು ಸಮಯವನ್ನು ಕಳೆಯುತ್ತಿದ್ದಾರೆ.[4]

ಆದರೆ ಅಂತರ್ಜಾಲದಲ್ಲಾಗಲಿ, ಮನೆಯ ಹಿರಿಯರ ಬಳಿ ಬಂದು ಕೇಳುವುದಾಗಲಿ, ಶಿಕ್ಷಕರ ಬಳಿ ಬಂದು ತಮ್ಮಲ್ಲಿರುವ ಪ್ರಶ್ನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಅವರಿಗೆ ಬೇಕಿರುವ ಹೊಳಹುಗಳು ಸರಿಯಾದ ಸಮಯಕ್ಕೆ, ಸರಿಯಾದ ವಿಧದಲ್ಲಿ ದಕ್ಕದೆ ಅವರು ಅಪಾಯಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುವೆಡೆಗೆ ಅವರನ್ನು ದೂಡಲಾಗುತ್ತದೆ.

1. ಶಾಲಾ ವಾತಾವರಣದಲ್ಲಿ ಅವರಿಗೆ ಸಿಗಬೇಕಿರುವ ಎಲ್ಲ ರೀತಿಯ ಸ್ಪಂದನೆ ಮತ್ತು ನೆರವುಗಳು ಅವರಿಗೆ ಸಿಕ್ಕಿದರೆ ಅವರು ಸದೃಢ ವಯಸ್ಕರಾಗುವುದರಲ್ಲಿ ಸಂದೇಹವಿಲ್ಲ. ಶಾಲೆಯಲ್ಲಿ ಶಿಕ್ಷಕರಿಂದ ಅವರಿಗೆ ಮಾಹಿತಿಯಷ್ಟೇ ಅಲ್ಲದೆ, ಆಪ್ತ ಸಮಾಲೋಚನೆಯಂತಹ ಮಾರ್ಗದರ್ಶನ ಶೈಕ್ಷಣಿಕ ವರ್ಷದ ಮೊದಲಿನಿಂದಲು ಸಿಕ್ಕರೆ ಅವರಿಗೆ ನೆರವಾಗುವುದು.[5]
2. ಕರ್ನಾಟಕ ಸರ್ಕಾರವು 9-14 ವರ್ಷದೊಳಗಿನ ಹೆಣ್ಣುಮಕ್ಕಳ ಜೀವನದ ಗುಣಮಟ್ಟವನ್ನು ಸುಧಾರಿಸುವ ಉದ್ದೇಶದಿಂದ, ಹದಿಹರೆಯದ ಹಂತದಲ್ಲಿ ಪ್ರಮುಖ ವಿಷಯಗಳ ಬಗ್ಗೆ ಅವರಿಗೆ ಅರಿವು ಮೂಡಿಸುವ ಮೂಲಕ ವಿಶಿಷ್ಟವಾದ ಶಾಲಾ ಆಧಾರಿತ ಶೈಕ್ಷಣಿಕ ಜಾಗೃತಿ ಶಿಬಿರವನ್ನು ಪರಿಚಯಿಸಿತು. ಸರ್ವಶಿಕ್ಷಣ ಅಭಿಯಾನ ಕರ್ನಾಟಕ ಮತ್ತು ಜಿಲ್ಲಾ ಶೈಕ್ಷಣಿಕ ತರಬೇತಿ ಸಂಸ್ಥೆ (ಡಯಟ್) 2002 ರಲ್ಲಿ ಸಮಗ್ರ ಶಾಲಾ ಆಧಾರಿತ ಶೈಕ್ಷಣಿಕ ಕಾರ್ಯಕ್ರಮವನ್ನು ಜಾರಿಗೆ ತರಲು ಉಪಕ್ರಮವನ್ನು ತೆಗೆದುಕೊಂಡಿತು. ಹದಿಹರೆಯದವರ ಸಮಸ್ಯೆಗಳಲ್ಲಿ ಪರಿಣಿತರಾದ ವಿವಿಧ ಕ್ಷೇತ್ರಗಳ ತಜ್ಞರ ಸಹಾಯದಿಂದ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕಿಶೋರಿಯರಿಗೆ  ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಯಿತು[6]. ಪೈಲಟ್ ಮಾದರಿಯಲ್ಲಿ ಈ ಕಾರ್ಯಕ್ರಮವನ್ನು ನಡೆಸಿದ ನಂತರ "ಕಿಶೋರಿ" ಕಾರ್ಯಕ್ರಮವನ್ನು ರಾಜ್ಯದ ಹಲವೆಡೆ 2011 ರಿಂದ ನಡೆಸಲಾಯಿತು.
3. ರಾಜ್ಯದಲ್ಲಿ ಹೆಚ್ಚೆಚ್ಚು ಲೈಂಗಿಕ ದೌರ್ಜನ್ಯದ ಪ್ರಕರಣಗಳು ಶಾಲಾಮಟ್ಟದಲ್ಲಿ ಹಾಗು ಶಾಲೆಯ ಹೊರಗೂ ದಾಖಲಾಗಿರುವುದು ಆತಂಕದ ವಿಷಯವಾಗಿದೆ[7]. ಕಲಬುರಗಿಯಲ್ಲಿ ಹಿಂದಿನ ವರ್ಷಗಳಿಗೆ ಹೋಲಿಸಿದರೆ

4 SiNgh, "IMPACT OF SOCIAL MEDIA ON SOCIAL LIFE OF TEENAGERS IN INDIA."
5 Mehra et al., "Mental Health Interventions among Adolescents in India."
6 Mallik and Vineeta, "Kishori Awareness Program-Reflections of the Teacher-Resource Persons."
7 "Child Sexual Abuse." www.newindianexpress.com/states/karnataka/2023/nov/25/child-sexual-abuse6160-pocso-cases-in-karnataka-between-2018-and-22-bengaluru-recorded-444-cases-in-2022-2635976.html accessed 6 Jan 2024

ಹೆಚ್ಚು ಪ್ರಕರಣಗಳು ದಾಖಲಾಗಿವೆ[8]. ಕೋವಿಡ್ ಸಮಯದಲ್ಲಿ ಶಾಲೆಗಳು ಮುಚ್ಚಿದ್ದ ಕಾರಣ ಕಿಶೋರಿಯರು ಎದುರಿಸಿದ ಹಾಗು ಈಗಲೂ ಎದುರಿಸುತ್ತಿರುವ ಸಮಸ್ಯೆಗಳು ಹಲವಾರಿವೆ. ಶಾಲಾ ಕಲಿಕೆಯಿಂದ ದೂರವಾಗಿ ಅವರ ಬೌದ್ಧಿಕ ಕಲಿಕೆಗೆ ತೊಡಕಾಗಿದ್ದು ಒಂದೆಡೆಯಾದರೆ[9], ಸಾಮಾನ್ಯವಾಗಿ ಶಾಲಾ ಸಮಯದಲ್ಲಿ ಅವರಿಗೆ ಸಿಗುತ್ತಿದ್ದ ಪೌಷ್ಟಿಕ ಆಹಾರದ ನಿಯಮಿತ ಸರಬರಾಜು ಅವರಲ್ಲಿ ಹಲವರ ಆರೋಗ್ಯದ ಮೇಲೆ ದುಷ್ಪರಿಣಾಮಗಳನ್ನು ಬೀರಿರುವುದಂತೂ ನಿಜವೇ ಆಗಿದೆ.

4. ಶಾಲಾ ಅನುಪಸ್ಥಿತಿಯಲ್ಲಿ ಬಾಲ್ಯ ವಿವಾಹದಂತಹ ಸಾಮಾಜಿಕ ಪಿಡುಗುಗಳಿಗೆ ಹಲವು ಕಿಶೋರಿಯರು ಬಲಿಯಾಗಿ ಶಾಲೆಯಿಂದ ಹೊರಗುಳಿದ್ದದಂತೂ ಒಪ್ಪಿಕೊಳ್ಳಬೇಕಿರುವ ಕಟುಸತ್ಯವಾಗಿದೆ. ಕರ್ನಾಟಕದಲ್ಲಿ ಅತಿಹೆಚ್ಚು ಬಾಲ್ಯವಿವಾಹ ಪ್ರಕರಣಗಳು ಪತ್ತೆಯಾಗಿರುವುದು ದುರಂತ[10]. ಹೀಗಾಗಿ ಹದಿಹರೆಯದ ಹೆಣ್ಣುಮಕ್ಕಳಿಗೆ ಅವರವರ ಶಾಲೆಗಳಲ್ಲಿ ಬಾಲ್ಯವಿವಾಹದ ಕುರಿತು ಹಾಗು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯ ಕುರಿತು ಮಾಹಿತಿ ಲಭ್ಯವಾಗುವುದು ಮುಖ್ಯವಾದ ವಿಷಯ.[11] ಜಾಗೃತಿಯ ಕಾರ್ಯಕ್ರಮಗಳು ಬಲಿಷ್ಠಗೊಳ್ಳಬೇಕಾದರೆ ಮಾಹಿತಿ ಹಾಗು ಅವರು ಮುಂದೆ ಆ ಸವಾಲುಗಳನ್ನು ಎದುರಿಸುವಾಗ ಆ ಮಾಹಿತಿಯನ್ನು ಬಳಸಿಕೊಂಡು ಏನನ್ನು ಮಾಡಬಹುದು ಎಂಬ ಕಾರ್ಯರೂಪವೂ ದೊರಕಿದರೆ ಉತ್ತಮ.

5. ದೇಶದೆಲ್ಲೆಡೆ ಹೆಣ್ಣುಮಕ್ಕಳಿಗೆಂದೇ ಆರಂಭಿಸಿದ ಇನ್ನೊಂದು ಯೋಜನೆಯೆಂದರೆ ಅದು "ಮೀನಾ" ಕಾರ್ಯಕ್ರಮ.  ಯುನಿಸೆಫ್ 1998 ರಲ್ಲಿ ಮೀನಾ ಕಾರ್ಯಕ್ರಮವನ್ನು ಮೊದಲು ದಕ್ಷಿಣ ಏಷ್ಯಾದಲ್ಲಿ (ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ ಮತ್ತು ಶ್ರೀಲಂಕಾ) ಪ್ರಾರಂಭಿಸಿತು. ಹೆಣ್ಣುಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಲು ಹಾಗು ಶಿಕ್ಷಣದ ಬಗ್ಗೆ ಬಾಲ್ಯದಿಂದಲೇ ಜಾಗೃತಿ ಮೂಡಿಸಲು ಮಾಡಿರುವ ಕಾರ್ಯಕ್ರಮವಾಗಿತ್ತು. ಪ್ರತಿಯೊಂದು ಶಾಲೆಯಲ್ಲಿ ಮೀನಾ ಕ್ಲಬ್‌ಗಳನ್ನು ಆರಂಭಿಸಿ ಅಲ್ಲಿರುವ 5 ರಿಂದ 8 ನೇ ತರಗತಿಯ ಮಕ್ಕಳನ್ನು ಅದರಲ್ಲಿ ಪಾಲ್ಗೊಳ್ಳುವಂತೆ ಮಾಡುವುದು. ಶಾಲೆಬಿಟ್ಟ ಮಕ್ಕಳನ್ನು ಮತ್ತೆ ಶಾಲೆಗೆ ತರಲು ಹಲವು ಜಾಥಾಗಳನ್ನು ಹಮ್ಮಿಕೊಳ್ಳಲಾಯಿತು. ಅಷ್ಟೇ ಅಲ್ಲದೆ ಮೀನಾ ಕ್ಲಬ್‌ನ ಸದಸ್ಯರು ಕಿಶೋರಿ ತರಬೇತಿಗಳಲ್ಲಿ ಪಾಲ್ಗೊಂಡು ಮಕ್ಕಳಲ್ಲಿ ಇರುವ ಹಲವು ಪ್ರತಿಭೆಗಳನ್ನು ಹೊರತರಲು ವಿಭಿನ್ನವಾದ ಚಟುವಟಿಕೆಗಳನ್ನು ಹೇಗೆ ಮಾಡಬಹುದೆಂದು ಕಲಿತುಕೊಂಡರು. ಜೀವನ ಕೌಶಲ್ಯಗಳ ಕರಿತು ಈ ಶಿಬಿರಗಳು ತರಬೇತಿಯನ್ನು ನೀಡಿದವು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಐಟಿ ಫಾರ್ ಚೇಂಜ್ ಸಂಸ್ಥೆಯು ಶಿಕ್ಷಣ ಹಾಗು ಮಹಿಳಾ ಸಶಕ್ತತೆ ರಂಗಗಳಲ್ಲಿ ಇರುವ ಹಲವು ವರ್ಷಗಳ ಅನುಭವಗಳನ್ನು ಒಗ್ಗೂಡಿಸಿ, 'ಹೊಸ ಹೆಜ್ಜೆ ಹೊಸ ದಿಶೆ' ಎನ್ನುವ ಹೊಸ ಕಾರ್ಯಕ್ರಮವನ್ನು ರೂಪಿಸಿದೆ. ಕಿಶೋರಿ ಕಾರ್ಯಕ್ರಮ ಹಾಗು ಮೀನಾ ಕ್ಲಬ್‌ಗಳ ಮಾದರಿಗಳು ಯಶಸ್ವಿಯಾದ ಸುಸ್ಥಿರ ಮಾದರಿಗಳಾಗಿದ್ದರಿಂದ ಅವನ್ನು ಒಟ್ಟುಗೂಡಿಸಿ ಈ ಹೊಸ ಮಾದರಿಯನ್ನು ತಯಾರಿಸಲಾಗಿದೆ.

8 Para, “POCSO Cases on the Rise in Kalaburagi District.” https://www.thehindu.com/news/national/karnataka/pocso-cases-on-the-rise-in-kalaburagi-district/article67158918.ece accessed 6 Jan 2024

9 Guariso and Björkman Nyqvist, “The Impact of the COVID-19 Pandemic on Children’s Learning and Wellbeing.”

10 “Child Marriages in Karnataka Rose by 300% in 5 Years, Shows Govt Data.” ndianexpress.com/article/cities/bangalore/child-marriages-in-karnataka-rose-by-300-in-5-years-shows-govt-data-8149838/ accessed 6 Jan 2024

11 Maity and Chakraborty, “Implications of the POCSO Act and Determinants of Child Sexual Abuse in India.”

ಇದರ ಮುಖ್ಯ ಉದ್ದೇಶ ಹದಿಹರೆಯದ ವಿದ್ಯಾರ್ಥಿಗಳಿಗೆ ಇರುವ ಹಲವಾರು ಪ್ರಶ್ನೆಗಳು, ಸವಾಲುಗಳು ಹಾಗು ಅಭಿಪ್ರಾಯಗಳ ಬಗ್ಗೆ ಯೋಚಿಸುತ್ತಲೇ ಅವರ ನೆಚ್ಚಿನ ವಿಷಯಗಳಲ್ಲಿ ಅವರ ಕಲಿಕೆಯನ್ನು ಪ್ರೋತ್ಸಾಹಿಸುವುದು. ತಂತ್ರಜ್ಞಾನ ಹಾಗು ಭಾಗೀದಾರಿ ಕಲಿಕೆಯ ಮೂಲಕ ಸಂವಾದಾತ್ಮಕವಾಗಿ ವಸ್ತುವಿಷಯಗಳನ್ನು ರೂಪಿಸುವುದು, ಹದಿಹರೆಯದ ಘಟ್ಟದಲ್ಲಿ ಉಂಟಾಗಬಹುದಾದ ಬಿಕ್ಕಟ್ಟುಗಳನ್ನು ಯುಕ್ತಿಯಿಂದ ಹಾಗೂ ಅರಿವಿನಿಂದ ದಾಟುವ ಕೌಶಲ್ಯಗಳನ್ನು ಐ.ಸಿ.ಟಿ ಗಳನ್ನು ಬಳಸಿ ತರಬೇತಿ ನೀಡುವುದು, ಕಿಶೋರಿಯರು ಪ್ರಜ್ಞಾಪೂರ್ವಕ ನಿರ್ಧಾರಗಳನ್ನು ತೆಗೆದುಕೊಳ್ಳಲು ಉತ್ತೇಜನ ನೀಡುವುದು, ಆಸಕ್ತ ವಿದ್ಯಾರ್ಥಿಗಳಿಗೆ ಹಲವು ತಂತ್ರಜ್ಞಾನ ಸಂಯೋಜಿತ ಶಿಬಿರಗಳನ್ನು ಹಮ್ಮಿಕೊಳ್ಳುವುದು ಹೀಗೆ ಹಲವು ಯೋಚನೆಗಳು ಈ ಕಾರ್ಯಕ್ರಮದಲ್ಲಿವೆ.

"ಹೊಸ ಹೆಜ್ಜೆ ಹೊಸ ದಿಶೆ" ಯೋಜನೆಯು ಹದಿಹರೆಯದ ಹೆಣ್ಣುಮಕ್ಕಳ ಸಬಲೀಕರಣಕ್ಕಾಗಿ ರೂಪಿಸಿದ ಯೋಜನೆಯಾಗಿದ್ದು ಅದರಲ್ಲಿ "ಕಿಶೋರಿ ಕ್ಲಬ್"ಗಳು ಮುಖ್ಯ ಕಾರ್ಯಕ್ರಮಗಳಾಗಿವೆ. ಮುಂಚೆ ಇದ್ದಂತಹ ಸಮಗ್ರ ಶಿಕ್ಷಣ ಕರ್ನಾಟಕದ "ಕಿಶೋರಿ" ಕಾರ್ಯಕ್ರಮ, ಯುನಿಸೆಫ್ ಸಂಸ್ಥೆಯ "ಮೀನಾ ಕ್ಲಬ್" ಕಾರ್ಯಕ್ರಮಗಳ ಮಾದರಿಯಂತೆ ಹಾಗು ಅವಶ್ಯಕವಾಗಿ ಬೇಕಿರುವ ಪೋಕ್ಸೋ ಕಾಯ್ದೆ ಕುರಿತ ಮಾಹಿತಿ ಸೇರಿದಂತೆ ಎಲ್ಲವನ್ನು ಒಳಗೊಂಡು "ಕಿಶೋರಿ ಕ್ಲಬ್"ಗಳು ಕಾರ್ಯ ನಿರ್ವಹಿಸುತ್ತಿವೆ.


ಶಾಲೆಯಲ್ಲಿರುವ ಒಬ್ಬರು ಮಹಿಳಾ ಶಿಕ್ಷಕಿಯೇ ಈ ಕ್ಲಬ್‌ನ ಉಸ್ತುವಾರಿಯನ್ನು ನೋಡಿಕೊಳ್ಳುವ "ಕಿಶೋರಿ ಕ್ಲಬ್ ಫೆಸಿಲಿಟೇಟರ್" (KCF) ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿನ ಶಿಕ್ಷಕಿಯರೇ ಹೀಗೆ ಮುಂದಾಳತ್ವವನ್ನು ವಹಿಸಿದರೆ ಮುಂದಿನ ವರ್ಷಗಳಲ್ಲಿ ಈ ಕ್ಲಬ್‌ಗಳು ಶಾಲೆಯ ಯೋಜನೆಯಲ್ಲಿ ಮೊದಲಿನಿಂದಲೇ ಇರುತ್ತವೆ ಹಾಗು ಸ್ವತಂತ್ರವಾಗಿ ನಡೆದುಕೊಂಡು ಹೋಗುತ್ತವೆ.

ರಾಜ್ಯದ ಕಲಬುರಗಿ ಹಾಗು ಮೈಸೂರು ಜಿಲ್ಲೆಗಳಲ್ಲಿ 146 "ಕಿಶೋರಿ ಕ್ಲಬ್"ಗಳನ್ನು ಆರಂಭಿಸಲಾಗಿದೆ. ಸುಮಾರು 6000 ಕಿಶೋರಿಯರು ಈ ಕ್ಲಬ್‌ಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಈ ಕ್ಲಬ್‌ಗಳನ್ನು ಕರ್ನಾಟಕದ ವಿವಿಧ ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ ಹದಿಹರೆಯದ ಹೆಣ್ಣುಮಕ್ಕಳ ವೇದಿಕೆಗಳಾಗಿ ನಿರ್ಮಿಸಿ, ಅವುಗಳ ಮುಖಾಂತರ ಅವರ ಜೀವನಕ್ಕೆ ಪೂರಕವಾಗುವ ಅಂಶಗಳ ಪರಿಚಯ ಹಾಗು ಸಶಕ್ತ ಭವಿಷ್ಯವನ್ನು ರೂಪಿಸಿಕೊಳ್ಳುವೆಡೆಗೆ ಉಪಯುಕ್ತ ತರಬೇತಿಗಳನ್ನು ನೀಡಲಾಗುತ್ತಿದೆ.

ಕಲಬುರಗಿ ಹಾಗು ಮೈಸೂರು ಜಿಲ್ಲೆಗಳ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಗಳ ಅಡಿಯಲ್ಲಿ ಬರುವ ಎಲ್ಲಾ ಶಾಲೆಗಳಲ್ಲಿಯೂ ಕಿಶೋರಿ ಕ್ಲಬ್‌ಗಳನ್ನು ಆರಂಭಿಸಲಾಗಿದೆ. ಮೊರಾರ್ಜಿ ವಸತಿ ಶಾಲೆಗಳು, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಸೇರಿದಂತೆ ಸುಮಾರು 70 ವಸತಿ ಶಾಲೆಗಳಲ್ಲಿ ಕಿಶೋರಿ ಕ್ಲಬ್‌ಗಳಿವೆ.

# ವಿಧಾನ

ಒಂದು ಹೆಣ್ಣುಮಗುವಿನ ಸಬಲೀಕರಣವಾಗಬೇಕಾದರೆ ಆಕೆಗೆ ಉತ್ತಮ ಶಿಕ್ಷಣ, ಜೀವನ ಕೌಶಲ್ಯಗಳು, ಜೀವನೋಪಾಯ ಹಾಗು ತಂತ್ರಜ್ಞಾನಗಳ ಪರಿಣಿತಿ ಇವೆಲ್ಲವೂ ಬೇಕಾಗುತ್ತವೆ.




ಇವೆಲ್ಲಾ ಅಂಶಗಳನ್ನು ಕಿಶೋರಿ ಕ್ಲಬ್‌ನ ರೂಪುರೇಷೆಯಲ್ಲಿ ಅಳವಡಿಸಿಕೊಳ್ಳಲಾಗಿದೆ.

- ಸರ್ಕಾರಿ ಪ್ರೌಢಶಾಲೆಗಳಲ್ಲಿ “ಕಿಶೋರಿ ಕ್ಲಬ್”ಗಳನ್ನು ಆರಂಭಿಸುವುದು. 8 ನೇ ತರಗತಿಯಿಂದ 10 ನೇ ತರಗತಿಯ ಹೆಣ್ಣುಮಕ್ಕಳು ಇದರಲ್ಲಿ ಭಾಗವಹಿಸಿ ತಮ್ಮ ಸಶಕ್ತತೆಗೆ ಇಂಬು ಕೊಡುವ ವೇದಿಕೆಯನ್ನು ಶಿಕ್ಷಕರ ಸಹಭಾಗಿತ್ವದಲ್ಲಿ ರಚಿಸಬೇಕೆಂಬ ಮಹದಾಶಯ ಇದರ ಹಿಂದಿದೆ.
- ಶಾಲೆಯಲ್ಲಿ ಕಿಶೋರಿಯರಿಗೆ ಪ್ರತಿದಿನವೂ ಲಭ್ಯವಿರುವ ಮಹಿಳಾ ಶಿಕ್ಷಕರೇ ಈ ಕ್ಲಬ್‌ಗಳ ನೇತೃತ್ವ ವಹಿಸಿ ನಡೆಸುವುದು. ಈ ನಿಟ್ಟಿನಲ್ಲಿ ಕಿಶೋರಾವಸ್ಥೆಯ ಅನೇಕ ಮಜಲುಗಳು ಮತ್ತು ಅದರೊಟ್ಟಿಗೆ ಬರುವ ಅನೇಕ ಸಂಕಷ್ಟಗಳ ಬಗ್ಗೆ ನಡೆಸಿರುವ ಕಾರ್ಯಾಗಾರಗಳು ಶಿಕ್ಷಕರಿಗೆ ಬೆಂಬಲ ನೀಡಿವೆ.
- ಪ್ರತೀ 15 ದಿನಗಳಿಗೊಮ್ಮೆ ಶಾಲೆಯ ಅನುಕೂಲಕ್ಕೆ ತಕ್ಕಂತೆ ಕಿಶೋರಿ ಕ್ಲಬ್ ಸಭೆಗಳನ್ನು ನಡೆಸುವುದು.

- ಈ ಸಭೆಗಳಿಗೆ ಬೇಕಿರುವ ಸಂಪನ್ಮೂಲಗಳನ್ನು ಯೋಜನಾ ತಂಡ ನಿರ್ಮಿಸಿ ನಂತರ ಶಿಕ್ಷಕಿಯರ ಚರ್ಚೆಗಳಲ್ಲಿ ಪರಿಷ್ಕರಿಸಲಾಗಿದೆ.  ಇವುಗಳಲ್ಲಿ ಆಡಿಯೋ, ವೀಡಿಯೋ ಹಾಗು ಪಠ್ಯ ಸೇರಿದಂತೆ ವಿವಿಧ ರೂಪದ ಕಲಿಕಾ ಸಂಪನ್ಮೂಲಗಳಿವೆ.
- ಕಿಶೋರಿಯರ ಸಮಸ್ಯೆಗಳು ಹಾಗು ಸವಾಲುಗಳನ್ನು ಮುಕ್ತವಾಗಿ ಚರ್ಚಿಸುವುದು. ಜೊತೆಗೆ ಅವರಿಗೆ ಬೇಕಿರುವ ವಿವಿಧ ರೀತಿಯ ಮಾಹಿತಿಗಳನ್ನು ನೀಡುವುದು. ಕಿಶೋರಿಯರಿಗೆ ನೆರವಾಗುವಂತಹ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳುವುದು ಎನ್ನುವುದನ್ನು ಶಿಕ್ಷಕಿರು ಅವರೊಡನೆಯೇ ಸೇರಿ ಯೋಜಿಸುವುದು.
- ಕಿಶೋರಿ ಕ್ಲಬ್ ಚಟುವಟಿಗೆಗಳ ಭಾಗವಾಗಿ ಹಲವು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇವುಗಳ ಮೂಲಕ ಹೆಣ್ಣುಮಕ್ಕಳಿಗೆ ಬೇಕಿರುವ ಹಲವು ರೀತಿಯ ಕೌಶಲಗಳನ್ನು ಕಲಿಸಲಾಗುತ್ತಿದೆ. ಉದಾಹರಣೆಗೆ ಕಂಪ್ಯೂಟರ್ ಕಲಿಕೆ, ಆಡಿಯೋ ವೀಡಿಯೋ ತಯಾರಿಸುವ ಕಲಿಕೆ ಮತ್ತು ಜೀವನ ಕೌಶಲಗಳ ಕಲಿಕೆ.
- ಶಾಲೆಯ ನಂತರ ಅವರಿಗಿರುವ ವಿವಿಧ ವೃತ್ತಿಗಳ ಆಯ್ಕೆಗಳಿಗೆ ಅವರನ್ನು ಪರಿಚಯಿಸುವುದು.

ಮೊದಲಿಗೆ ಆಯ್ದ ಶಾಲೆಗಳ ಮುಖ್ಯ ಶಿಕ್ಷಕರೊಂದಿಗೆ ಒಂದು ದಿನದ ಕಾರ್ಯಗಾರವನ್ನು ಮಾಡಿ ಅವರ ಸಲಹೆಗಳನ್ನು ತೆಗೆದುಕೊಳ್ಳಲಾಯಿತು. ನಂತರ ಮಕ್ಕಳಿಗೆ ಚೆನ್ನಾಗಿ ಸ್ಪಂದಿಸುವ ಮಹಿಳಾ ಶಿಕ್ಷಕಿಯರನ್ನು ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಅವೇ ಆಯ್ದ ಶಾಲೆಗಳಿಂದ ಆಯ್ಕೆ ಮಾಡಲಾಯಿತು. ಕಲಬುರಗಿ ಹಾಗು ಮೈಸೂರು ಜಿಲ್ಲೆಗಳಿಗೆ ಹಾಗು ಅವರವರ ಶಾಲಾ ವಾತಾವರಣಕ್ಕೆ ಹೊಂದುವಂತೆ ಹೇಗೆ ಕಿಶೋರಿ ಕ್ಲಬ್ ಅನ್ನು ನಡೆಸಬಹುದೆಂಬ ಹಲವು ಚರ್ಚೆಗಳಾದವು.




*ಕಾರ್ಯಗಾರದಲ್ಲಿ ಚಟುವಟಿಕೆಗಳು ಹಾಗು ಚರ್ಚೆಯಲ್ಲಿರುವ ಶಿಕ್ಷಕಿಯರು*

ಶಿಕ್ಷಕಿಯರ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಕಿಶೋರಿಯರಿಗೆ ಯಾವ ಯಾವ ವಿಷಯಗಳು ಮುಖ್ಯ, ಅವರವರ ಶಾಲೆಗಳ ವಸ್ತುಸ್ಥಿತಿಯ ಅವಲೋಕನ ಹಾಗು ಕಿಶೋರಿ ಕ್ಲಬ್‌ಗಳಲ್ಲಿ ಯಾವ ವಿಷಯಗಳ ಬಗ್ಗೆ ಮಾತಾಡಬಹುದೆಂಬ ಹಲವು ಸುತ್ತುಗಳ ಚರ್ಚೆಗಳನ್ನು ನಡೆಸಿದ ನಂತರ ಪಠ್ಯಕ್ರಮವನ್ನು ಅಂತಿಮ ರೂಪಕ್ಕೆ ತರಲಾಯಿತು. ವಿವಿಧ ವಿಷಯ ಶಿಕ್ಷಕಿಯರು ಇಲ್ಲಿ ಒಟ್ಟಾಗಿ ಯಾಕೆ "ಕಿಶೋರಿ ಕ್ಲಬ್"ಗಳ ಅವಶ್ಯಕತೆ ಶಾಲೆಗಳಲ್ಲಿದೆ? ಪ್ರತಿ ಶಾಲೆಯಲ್ಲಿಯೂ ಅವರು ಎದುರಿಸುತ್ತಿರುವ ಸವಾಲುಗಳೇನು? ಅದಕ್ಕೆ ಹೇಗೆ ಎಲ್ಲರೂ ಒಟ್ಟಾಗಿ ಪರಿಹಾರ ಕಂಡುಕೊಳ್ಳಬಹುದು ಎಂಬ ಬಗ್ಗೆ ಚರ್ಚೆ ನಡೆಸಿ ಒಮ್ಮತದ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

ಭಾಗೀದಾರಿ ಪ್ರಕ್ರಿಯೆಗಳು ಈ ಕಿಶೋರಿ ಕ್ಲಬ್ ಅನ್ನು ಮುಂದಿನ ದಿನಗಳಲ್ಲಿ ಸ್ವತಂತ್ರವಾಗಿ ನಡೆಸಲು ಪ್ರಮುಖ ಪಾತ್ರ ವಹಿಸುವುದರಿಂದ ಅವೇ ಪ್ರಕ್ರಿಯೆಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ.

ಈ ವಿಷಯಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ,

1. ಹದಿಹರೆಯ ಅಥವ ಕಿಶೋರಾವಸ್ಥೆ ಎಂದರೇನು - ಈ ಹಂತದಲ್ಲಿ ಆಗುವ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಬದಲಾವಣೆಗಳ ಸ್ವರೂಪವೇನು ಎನ್ನುವುದರ ಬಗ್ಗೆ ಅರಿವು ಮೂಡಿಸುವುದು
2. ಋತುಚಕ್ರ - ಏಕೆ, ಹೇಗೆ ಮತ್ತು ಇದರ ಸವಾಲುಗಳನ್ನು ನಿಭಾಯಿಸುವ ಬಗೆ ಏನು
3. ಸಂತಾನೋತ್ಪತ್ತಿ ಪ್ರಕ್ರಿಯೆ - ಹೇಗಾಗುತ್ತದೆ
4. ಗುರುತು ಮತ್ತು ಅಸ್ಮಿತೆ ಹಾಗು ಹದಿಹರೆಯ
5. ಬಾಡಿ ಇಮೇಜ್ - ದೇಹದ ಚಿತ್ರಣ ಮತ್ತು ಹದಿಹರೆಯ
6. ಪುರುಷ ಪ್ರಧಾನತೆ ಮತ್ತು ಸಮಾಜದಲ್ಲಿರುವ ಅಸಮಾನತೆಯ ಹಿಂದೆ ಇದರ ಪಾತ್ರ
7. ಮಾಧ್ಯಮ ಮತ್ತು ಮಾರುಕಟ್ಟೆ - ಪುರುಷ ಪ್ರಧಾನತೆಯನ್ನು ಎತ್ತಿಹಿಡಿಯುವಲ್ಲಿ ಇದರ ಕೀಲಕ ಪಾತ್ರ
8. ಸಮತೋಲನ ಆಹಾರ ಮತ್ತು ಪೌಷ್ಟಿಕತೆ
9. ಅನೀಮಿಯ/ರಕ್ತ ಹೀನತೆ
10. ಜೀವನ ಕೌಶಲ್ಯಗಳೆಂದರೇನು ಹಾಗೂ ಯಶಸ್ವಿ/ಸಬಲ ಕಿಶೋರಿಯಾಗುವೆಡೆಗೆ ಇವುಗಳ ಪಾತ್ರವೇನು. ಜೀವನ ಕೌಶಲ್ಯಗಳನ್ನು ಸಬಲತೆಯ ಸಾಧನವಾಗಿ ಬಳಸಿಕೊಳ್ಳುವುದು ಹೇಗೆ ಎನ್ನುವದನ್ನು ಕೇಸ್ ಸ್ಟಡೀಸ್ ಮತ್ತು ಉದಾಹರಣೆಗಳ ಮುಖಾಂತರ ಅರ್ಥ ಮಾಡಿಕೊಳ್ಳುವುದು
11. POCSO - ಲೈಂಗಿಕ ಹಿಂಸೆ ಮತ್ತು ಕಿರುಕುಳದ ಸ್ವರೂಪ ಹಾಗು ಅದನ್ನು ಮೀರುವುದಕ್ಕಾಗಿ ಕಿಶೋರಿಯರಿಗಿರುವ ಬೆಂಬಲಗಳೇನು
12. ಸ್ವಾಯತ್ತತೆಯತ್ತ ನಡೆಯಲು ಶಿಕ್ಷಣದ ಪಾತ್ರ - ಇರುವ ಆಯ್ಕೆಗಳೇನು ಎನ್ನುವುದರ ಪರಿಚಯ
13. ಸ್ವಾಯತ್ತತೆ ಮತ್ತು ಉದ್ಯೋಗಾವಕಾಶಗಳು (career guidance)
14. ಅಂತರ್ಜಾಲ - ಋಣಾತ್ಮಕ ಮತ್ತು ಧನಾತ್ಮಕ ಅಂಶಗಳು. ಸಶಕ್ತತೆಯ ಸಾಧನವಾಗಿ ಅಂತರ್ಜಾಲವನ್ನು ಬಳಸಿಕೊಳ್ಳುವ ಬಗೆ ಏನು

15. Action plan - ಶಿಕ್ಷಣ, ಕೆಲಸ ಮತ್ತು ಭವಿಷ್ಯದ ಬಗ್ಗೆ ಕಟ್ಟಿದ ಕನಸು/ಯೋಜನೆಗಳ ದಾಖಲಾತಿ ಇದರಿಂದಾಗಿ ಶಾಲೆಗಳಲ್ಲಿ ಕಿಶೋರಿ ಕ್ಲಬ್‌ಗಳು ವಿಜೃಂಭಣೆಯಿಂದ ಆರಂಭವಾಗಿ ಸುಸೂತ್ರವಾಗಿ ಸಡೆದುಕೊಂಡು ಹೋಗುತ್ತಿವೆ. ಹಲವು ಶಾಲೆಗಳಲ್ಲಿ ಶಿಕ್ಷಕಿಯರೇ "ಕಿಶೋರಿ ಕ್ಲಬ್ ಪ್ರಮಾಣವಚನ"ವನ್ನು ರೂಪಿಸಿದ್ದು ಪ್ರತಿ ಸೆಶನ್‌ಗಳನ್ನು ಆರಂಭಿಸುವ ಮೊದಲು ಅವುಗಳನ್ನು ಎಲ್ಲರೂ ಜೊತೆಯಾಗಿ ಹೇಳಿ ನಂತರ ಆರಂಭಿಸುತ್ತಿದ್ದಾರೆ. ಶಾಲೆಗಳಲ್ಲಿ ಇರುವ ಸೌಕರ್ಯಗಳನ್ನು ನೋಡಿಕೊಂಡು ಅವರಿಗೆ ತಕ್ಕುದಾದ ನೆರವನ್ನು ನೀಡಲಾಗುತ್ತಿದೆ. ಸಂಪನ್ಮೂಲಗಳ ಕೊರತೆಯಿರುವ ಶಾಲೆಗಳಿಗೆ ಹೆಚ್ಚುವರಿಯಾಗಿ ಸ್ಪೀಕರ್‌ಗಳು ಹಾಗು ಫ್ಲಿಪ್‌ಬುಕ್‌ಗಳನ್ನು ನೀಡಲಾಗಿದೆ.

ಆಡಿಯೋ ದೃಶ್ಯ ಶೈಕ್ಷಣಿಕ ಸಾಧನಗಳು ಮಕ್ಕಳ ಸೃಜನಶೀಲತೆಯ ಮಟ್ಟಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತವೆ. ವೇಗವಾಗಿ ಬದಲಾಗುತ್ತಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ಜಗತ್ತು ಮಕ್ಕಳಿಗೆ ತಂದಿರುವ ಹೊಸ ತಾಂತ್ರಿಕ ಸಾಧನಗಳನ್ನು ಜಾಗೃತಿಯೊಂದಿಗೆ ಬಳಸಿದರೆ, ಅವು ಮಕ್ಕಳಿಗೆ ತುಂಬಾ ಸಹಾಯಕವಾಗಬಹುದು[12]. ಬೋಧನಾ ವಿಧಾನವಾಗಿ ಆಡಿಯೋ-ದೃಶ್ಯಗಳನ್ನು ಬಳಸುವುದು ಚಿಂತನೆಯನ್ನು ಉತ್ತೇಜಿಸುತ್ತದೆ ಮತ್ತು ತರಗತಿಯಲ್ಲಿ ಕಲಿಕೆಯ ವಾತಾವರಣವನ್ನು ಸುಧಾರಿಸುತ್ತದೆ. ಇವೇ ಉದ್ದೇಶದಿಂದ ಎಲ್ಲಾ ಮಾಡ್ಯೂಲ್‌ಗಳಿಗೆ ಒಂದೊಂದು ಡಿಜಿಟಲ್ ಕಥೆ ಹಾಗು ಅದನ್ನು ಅರ್ಥ ಮಾಡಿಕೊಳ್ಳಲು ಪೂರಕವಾಗುವ ಚಟುವಟಿಕೆಗಳನ್ನು ಹೊಂದಿರುವ ಸಹಾಯ ಕೈಪಿಡಿಗಳನ್ನು ನೀಡಲಾಗಿದೆ.


12 Yazar and Arifoglu, “A Research of Audio Visual Educational Aids on the Creativity Levels of 4-14 Year Old Children as a Process in Primary Education.”



*ಫ್ಲಿಪ್‌ಬುಕ್*



*ಡಿಜಿಟಲ್ ಕಥೆ*


ಕಿಶೋರಿ ಕ್ಲಬ್ - ಕೈಪಿಡಿ

**ಕಲಿಕಾ ಘಟಕ 08 - ಸಮತೋಲನ ಆಹಾರ ಮತ್ತು ಪೌಷ್ಟಿಕತೆ**

**ಉದ್ದೇಶ:**
- ಸಮತೋಲನ ಆಹಾರ ಎಂದರೇನು ಹಾಗು ಅದರಲ್ಲಿರಬೇಕಾದ ಮೂರು ಮುಖ್ಯ ಅಂಶಗಳು ಯಾವುವು ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು.
- ಉದಾಹರಣೆಗಳೊಂದಿಗೆ ಸಮತೋಲನ ಆಹಾರದಲ್ಲಿರಬೇಕಾದದ್ದನ್ನು ತಿಳಿದುಕೊಳ್ಳುವುದು.

**ಬೇಕಿರುವ ಸಾಮಗ್ರಿ/ಸಂಪನ್ಮೂಲಗಳು**
- ಆಡಿಯೋ ಸಂಪನ್ಮೂಲವನ್ನು ಬಳಸಲು - ಲ್ಯಾಪ್‌ಟಾಪ್ ಅಥವ ಡೆಸ್ಕ್‌ಟಾಪ್ ಕಂಪ್ಯೂಟರ್ ಅಥವ ಮೊಬೈಲ್ ಫೋನ್ ಅದರೊಟ್ಟಿಗೆ ಸ್ಪೀಕರ್
- ವೀಡಿಯೋ ಸಂಪನ್ಮೂಲವನ್ನು ಬಳಸಲು - ಮೇಲಿನ ಸಾಮಗ್ರಿಗಳ ಜೊತೆಗೆ ಪ್ರೊಜೆಕ್ಟರ್ ವ್ಯವಸ್ಥೆ.
- ಪ್ರತಿ ಕಿಶೋರಿಗೂ ಅವರ ನೋಟ್‌ಬುಕ್ ಅನ್ನು ತಂದುಕೊಳ್ಳಲು ಹೇಳಿ

**ಕಿಶೋರಿ ಕ್ಲಬ್ ಫೆಸಿಲಿಟೇಟರ್ ಗಮನಕ್ಕೆ:**
- ಕಿಶೋರಿಯರು ಮತ್ತೆ ನಿಮ್ಮ ಮಧ್ಯೆ ಕಳೆದ 5 ಕಲಿಕಾ ಘಟಕಗಳ ಮೂಲಕ ಏರ್ಪಟ್ಟ ಆತ್ಮೀಯತೆಯನ್ನು ಅವರೊಟ್ಟಿಗೆ ಹೆಚ್ಚಿನ ಚರ್ಚೆಯನ್ನು ಮಾಡಲು ಬಳಸಬಹುದೆ?
- ಸೈದ್ಧಾಂತಿಕವಾಗಿ ಒಪ್ಪಿಕೊಂಡ ಅಥವ ರುಜುಪಡಿಸಲಾದ ಮಾಹಿತಿಯನ್ನು ಮಾತ್ರ ಹಂಚಿಕೊಳ್ಳಿ. ನಿಮ್ಮ ಅಭಿಪ್ರಾಯಗಳು ಸೈದ್ಧಾಂತಿಕವೇ ಅಲ್ಲವೆ ಎನ್ನುವುದನ್ನು ಯೋಚಿಸಿ ಸೂಕ್ತವಾದ ಮಾಹಿತಿ ಹಂಚಿಕೊಳ್ಳಿ
- ಕಿಶೋರಿಯರು ಕೇಳಿದ ಪ್ರಶ್ನೆಗಳಿಗೆ ನಿಮ್ಮ ಬಳಿ ಉತ್ತರಗಳಿಲ್ಲದಿದ್ದರೆ, ನಾವು ಮಾತನಾಡಿಕೊಂಡಂತೆ, ಮುಂದಿನ ಕಿಶೋರಿ ಕ್ಲಬ್ ಸಭೆಯಲ್ಲಿ ಹಂಚಿಕೊಳ್ಳುವುದಾಗಿ ತಿಳಿಸಿ, ಆ ಪ್ರಶ್ನೆಗಳನ್ನು ನಮಗೆ ವರ್ಗಾಯಿಸಿ.

1 ಹೊಸ ಹೆಜ್ಜೆ ಹೊಸ ದಿಶೆ

*ಸಹಾಯ ಕೈಪಿಡಿ*

ಪ್ರತೀ ಸೆಶನ್‌ನ ನಂತರ ಕಿಶೋರಿಯರ ಮನಸ್ಸಿನಲ್ಲಿ ಮೂಡುವಂತಹ ಪ್ರಶ್ನೆಗಳನ್ನು ಉತ್ತರಿಸಲು, ಆ ಪ್ರಶ್ನೆಗಳ ಬಗ್ಗೆ ಯೋಚಿಸಲು ನೆರವಾಗುವಂತೆ ಫಾರ್ಮ್ ಒಂದನ್ನು ರಚಿಸಲಾಗಿದೆ. ಇದರಿಂದಾಗಿ ನಿರಂತರವಾಗಿ ಶಿಕ್ಷಕಿಯರಿಗೆ ನೆರವನ್ನು ನೀಡಲು ಜೊತೆಗೆ ಹದಿಹರೆಯದ ಹೆಣ್ಣುಮಕ್ಕಳ ಮನಸ್ಸಿನಲ್ಲಿ ಮೂಡುವಂತಹ ಯೋಚನೆಗಳನ್ನು ಸಮರ್ಪಕವಾಗಿ ಹಿಡಿದಿಡಲು ಸಾಧ್ಯವಾಗುತ್ತದೆ.

KCF ಶಿಕ್ಷಕಿಯರ ವಾಟ್ಸಾಪ್ ಗುಂಪನ್ನು ನಿರ್ಮಿಸಲಾಗಿದೆ, ಇಲ್ಲಿ ತಂತಮ್ಮ ಶಾಲೆಗಳಲ್ಲಿ ಕಿಶೋರಿ ಕ್ಲಬ್‌ಗಳು ಹೇಗೆ ನಡೆಯುತ್ತಿವೆ, ಶಾಲಾ ವಾತಾವರಣಕ್ಕೆ ಹೊಂದಿಕೊಂಡಂತೆ ತಾವು ಮಾಡಿಕೊಂಡಂತಹ ಬದಲಾವಣೆಗಳೇನು ಇತ್ಯಾದಿ ವಿಷಯಗಳನ್ನು ಆ ಗುಂಪಿನಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಈ ರೀತಿ ವೃತ್ತಿಪರ ಕಲಿಕಾ ಸಮುದಾಯಗಳನ್ನು ನಿರ್ಮಿಸುವುದು ಮುಂದೆ ಈ ಕಿಶೋರಿ ಕ್ಲಬ್ ಮಾದರಿಗಳು ಸ್ವತಂತ್ರವಾಗಲು ಅನುವು ಮಾಡಿಕೊಡುತ್ತವೆ.[13]

13 Kasinathan, “Professional Learning Communities, an ICT Integrated Model of in-Service Teacher Education.”

ತಿಂಗಳಿಗೊಮ್ಮೆ ಆನ್‌ಲೈನ್‌ನಲ್ಲಿ ಭೇಟಿ ಮಾಡುವ ಮೂಲಕ ನಿರಂತರವಾಗಿ ಸಬಲೀಕರಣದೆಡೆಗೆ ಎಲ್ಲಾ ಶಿಕ್ಷಕಿಯರೂ ಹೆಜ್ಜೆಯಿಡುತ್ತಿದ್ದಾರೆ. ಕಿಶೋರಿ ಕ್ಲಬ್‌ನ ಎಲ್ಲಾ ಸಂಪನ್ಮೂಲಗಳನ್ನು ಈ ಲಿಂಕಿನಲ್ಲಿ ಪಡೆಯಬಹುದಾಗಿದೆ. ಇದು ಎಲ್ಲರಿಗೂ ಮುಕ್ತವಾಗಿ ಲಭಿಸುವ "ಕರ್ನಾಟಕ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು" (KOER) ವೆಬ್ ತಾಣದಲ್ಲಿದೆ. **tinyurl.com/KishoriClub**

ಕಿಶೋರಿ ಕ್ಲಬ್ ಮಾದರಿ ಅತಿ ಕಡಿಮೆ ಸಂಪನ್ಮೂಲಗಳನ್ನು ಬಳಸುತ್ತದೆ. ಎಲ್ಲಾ ತಂತ್ರಜ್ಞಾನಗಳೂ ಮುಕ್ತ ತಂತ್ರಾಂಶಗಳಾಗಿದ್ದು ಉಚಿತವಾಗಿ ಬಳಸಬಲ್ಲತಂವಾಗಿವೆ. ಉದಾಹರಣೆಗೆ ಈ ಆನ್‌ಲೈನ್ ಭೇಟಿಗಳು ಬಿಗ್ ಬ್ಲೂ ಬಟನ್ (Big Blue Button) ಎಂಬ ಮುಕ್ತ ತಂತ್ರಾಂಶವಾಗಿದೆ.









***ಶಾಲೆಗಳಲ್ಲಿ ಕಿಶೋರಿ ಕ್ಲಬ್‌ಗಳನ್ನು ನಡೆಸುತ್ತಿರುವುದು***

ಕಿಶೋರಿ ಕ್ಲಬ್‌ನ ಕಿಶೋರಿಯರಿಗಾಗಿ ಹೊಸದಾಗಿ ಪಾಡ್‌ಕಾಸ್ಟ್ ಒಂದನ್ನು ಆರಂಭಿಸಲಾಗಿದೆ. ನನ್ ವಾಯ್ಸ್ ನನ್ ಚಾಯ್ಸ್ ಎಂಬ ಶೀರ್ಷಿಕೆಯಲ್ಲಿ ಒಂದನೇ ಹಾಗು ಎರಡನೇ ಎಪಿಸೋಡ್‌ಗಳು ಬಿತ್ತರಗೊಂಡಿದ್ದು ಈ ಲಿಂಕುಗಳಲ್ಲಿ ಕೇಳಬಹುದಾಗಿದೆ. ಇದರಲ್ಲಿ ಕಿಶೋರಿಯರು, ಮಹಿಳಾ ಶಿಕ್ಷಕಿಯರು ವಿಭಿನ್ನ ವಿಷಯಗಳ ಬಗ್ಗೆ ಮಾತನಾಡಿದ್ದಾರೆ.

**on.soundcloud.com/utkHS**

**on.soundcloud.com/mdAaP**

ಮೊದಲೇ ಹೇಳಿದಂತೆ ಕಿಶೋರಿಯರು ಅತಿಹೆಚ್ಚು ಸಾಮಾಜಿಕ ತಾಣಗಳನ್ನು ಬಳಸುತ್ತಿದ್ದಾರೆ. ಇವುಗಳಿಂದ ಅವರ ಮಾನಸಿಕ ಸ್ವಾಸ್ಥ್ಯಕ್ಕೆ ಪ್ರಭಾವವಾಗುತ್ತಿರುವುದು ಆತಂಕಕಾರಿ ವಿಷಯವಾಗಿದೆ[14]. ಆದರೆ ಅವುಗಳನ್ನು ನಿಷಿದ್ಧ ಎಂದು ನಿಲ್ಲಿಸುವುದು ಋಣಾತ್ಮಕವಾದ ಪರಿಣಾಮಗಳನ್ನು ಬೀರಬಹುದು. ಆದ್ದರಿಂದ ಅವರಿಗೆ ಸಹ್ಯವಾಗುವ ಭಾಷೆಯಲ್ಲಿಯೇ ಅಂತರ್ಜಾಲದ ಜವಾಬ್ದಾರಿಯುತ ಬಳಕೆ, ಕಿಶೋರಿಯರ ಬದುಕಿಗೆ ಬೇಕಿರುವ ಧನಾತ್ಮಕ ವಿಷಯಗಳ ಆಕರ್ಷಕ ಮಂಡನೆಯನ್ನು ಗುರಿಯಾಗಿಸಿಕೊಂಡು "ಕಿಶೋರಿ ಅಡ್ಡ" ಎನ್ನುವ ಇನ್‌ಸ್ಟಾಗ್ರಾಮ್ ಪುಟವನ್ನು ಆರಂಭಿಸಲಾಗಿದೆ. ಇದರಲ್ಲಿ ಕಿಶೋರಿಯರು, ಶಿಕ್ಷಕಿಯರು ಹಾಗು ಇತರರು ಉತ್ಸುಕತೆಯಿಂದ ಭಾಗವಹಿಸುತ್ತಿದ್ದಾರೆ. ಇದನ್ನು ಈ ಲಿಂಕಿನಲ್ಲಿ ನೋಡಬಹುದು **www.instagram.com/kishoriadda/**

## ಹೊಳಹುಗಳು

ಕಲಬುರಗಿ ಜಿಲ್ಲೆಯಲ್ಲಿ ನಡೆದಿರುವ ವಿಷಯಗಳ ಚರ್ಚೆಗಳಲ್ಲಿ ಕಿಶೋರಿಯರು ಹಲವು ಆಸಕ್ತಿದಾಯಕ ಪ್ರಶ್ನೆಗಳನ್ನು ಕೇಳಿದ್ದಾರೆ,

(ಈ ಪ್ರಶ್ನೆಗಳನ್ನು ಶಿಕ್ಷಕಿಯರೇ ತುಂಬಿರುವ ದಾಖಲಾತಿ ಫಾರ್ಮ್‌ನಿಂದ ಯಥಾವತ್ತಾಗಿ ತೆಗೆದುಕೊಳ್ಳಲಾಗಿದೆ )

- ದೈಹಿಕ ಮಾನಸಿಕ ಮತ್ತು ಬೌದ್ಧಿಕ ಬದಲಾವಣೆಗಳ ಬಗ್ಗೆ
- ಮುಟ್ಟಿನ ಬಗ್ಗೆ. ಮನೆಯಲ್ಲಿ ಆ ವೇಳೆ  ಯಾಕೆ ನಮ್ಮನ್ನು ಎಲ್ಲದರಿಂದ ದೂರವಿಡುತ್ತಾರೆ? ಆ ಸಂದರ್ಭದಲ್ಲಿ ನಾವು ಹೇಗೆ ನಡ್ಕೊಳ್ಳೇಕು?
- ಹದಿಹರೆಯದಲ್ಲಿ ಭಾವನೆಗಳು ಏಕೆ ಏರುಪೇರು ಆಗುತ್ತವೆ?
- ಋತುಚಕ್ರದ ಸಮಯದಲ್ಲಿ ಆಗುವ ಬದಲಾವಣೆ ಮತ್ತು ಪೌಷ್ಟಿಕ ಆಹಾರ ಸೇವನೆಯ ಬಗ್ಗೆ.
- ನಾವು ಮುಂದೆ ಐ ಎ ಸ್ ಮಾಡಬೇಕಾದರೆ ಏನು ಓದಬೇಕು?
- ಮುಟ್ಟಿನಿಂದಾಗುವ ತೊಂದರೆಗಳು ಏನು?
- ಸಂತಾನೋತ್ಪತ್ತಿಯ ಬಗ್ಗೆ
- ಹೊಟ್ಟೆ ನೋವಿನ ಬಗ್ಗೆ

14 Azhari et al., “Social Media Use in Female Adolescents.”

- Gender equality ಅಂದ್ರೆ ಏನು?
- White discharge, about normal delivery, pregnant woman's routines
- About girls marriage
- How to dispose pads in school?
- When the boys rag the girls what we do?
- Adolescence problems
- Mental development
- Adolescence understanding
- If husband is drunk, does it affects to conceive?
- How to believe others if we share something with them?
- What is PCOS?
- My mom is working all days even periods time also why?
- ಗಂಡುಮಕ್ಕಳು matured ಆಗ್ತಾರ?
- ದೈಹಿಕ ಬದಲಾವಣೆಗಳು ಏಕೆ ಉಂಟಾಗುತ್ತದೆ?
- How to recover from periods ?
- ಬದಲಾದ ಭಾವನೆಗಳಿಗೆ ಸ್ಪಂದಿಸುವರೆ?
- Do every kishori face all these changes?
- ಸಮಾಜದಲ್ಲಿ ಯಾವಾಗಲೂ ಪುರುಷರಿಗೆ ಹೆಚ್ಚು ಪ್ರಧಾನತೆ ಅಲ್ಲವೇ
- ಸಮಾಜದಲ್ಲಿ ಲಿಂಗ ಅಸಮಾನತೆ ಯಾವಾಗ ಆರಂಭವಾಯಿತು? ಪುರುಷ ಪ್ರಾಧಾನ್ಯತೆ ತಂದವರಾರು
- ಮಂಗಳ ಮುಖಿ ಹೇಗಾಗುತಾರೆ ?
- How to build self-respect
- ಬಾಡಿ ಇಮೇಜ್ ಗಂಡು ಹುಡುಗರಲ್ಲಿ ಇರುತ್ತಲ್ವಾ
- ಸೌಂದರ್ಯಕ್ಕೆ ಬೆಲೆ ಕೊಡ ಬಾರದೆ?
- ಗುರುತು ಎಂದರೇನು
- ಅಸ್ಮಿತೆ ಎಂದರೇನು
- ನಾನು ಏಕೆ ಸುಂದರವಾಗಿ ಕಾಣುವುದಿಲ್ಲ
- ತಮ್ಮ ಇಮೇಜ್ ಬಗ್ಗೆ ಯಾಕೆ ಸುತ್ತ ಮುತ್ತಲಿನ ಜನರು ತಲೆ ಕೆಡಿಸಿಕೊಳ್ಳುತ್ತಾರೆ?

- ಸಮಾಜದಲ್ಲಿ ಲಿಂಗ ಅಸಮಾನತೆ ಯಾವಾಗ ಆರಂಭವಾಯಿತು?

ಈ ಪ್ರಶ್ನೆಗಳು ಅವರಲ್ಲಿರುವ ಹಲವು ಗೊಂದಲಗಳ, ಪ್ರಶ್ನೆಗಳ, ಯೋಚನೆಗಳ, ಮುಂದಿನ ಭವಿಷ್ಯದ ಬಗೆಗಿನ ಯೋಜನೆಗಳ ಒಂದು ಪುಟ್ಟ ರೂಪವಷ್ಟೆ. ಇವುಗಳಿಗೆ ಸರಿಯಾಗಿ ಉತ್ತರಿಸಬೇಕಿರುವ ಗುರುತರ ಜಾವಾಬ್ದಾರಿ ಎಲ್ಲರ ಮೇಲಿದೆ. ಮಹಿಳಾ ಶಿಕ್ಷಕಿಯರು ಸಮರ್ಪಕವಾಗಿ ಉತ್ತರಗಳನ್ನು ನೀಡುತ್ತಿದ್ದಾರೆ. ಅವರಿಗೆ ಎಲ್ಲಾದರೂ ಸ್ಪಷ್ಟತೆ ಬೇಕಿದ್ದರೆ ಅದನ್ನು ವಾಪಾಸು ಬಂದು ತಿಳಿಸುವುದಾಗಿ ಹೇಳುತ್ತಿದ್ದಾರೆ.

ಕಿಶೋರಿಯರಲ್ಲಿ ಬರುತ್ತಿರುವ ಪ್ರಶ್ನೆಗಳು ಕೆಲ ಶಿಕ್ಷಕಿಯರಿಗೆ ಆಶ್ಚರ್ಯ ಉಂಟು ಮಾಡಿದರೆ, ಹಲವರಿಗೆ ಸಂತಸವನ್ನು ತರುತ್ತಿವೆ. ಪಠ್ಯವನ್ನು ಮೀರಿದ ವಿಷಯಗಳು ಅವರ ಜೀವನಕ್ಕೆ ಅವಶ್ಯಕವಾಗಿ ಬೇಕಿರುವುದರಿಂದ ಸರ್ವೇ ಸಾಮಾನ್ಯವಾಗಿ ಕಿಶೋರಿಯರು ಕುತೂಹಲದಿಂದಿದ್ದಾರೆ. ನೀಡಿರುವ ಸಂಪನ್ಮೂಲಗಳ ಬಗ್ಗೆ ಕಿಶೋರಿಯರು ಹೇಗೆ ಪ್ರತಿಕ್ರಿಯಿಸುತ್ತಿದ್ದಾರೆ ಎಂಬುದನ್ನು ನೋಡಿಕೊಂಡು ಅವುಗಳನ್ನು ನಿರಂತರವಾಗಿ ಪರಿಷ್ಕರಿಸಲಾಗುತ್ತಿದೆ. ಕೆಲವೊಮ್ಮೆ ಕಿಶೋರಿಯರು ಕೇಳಿರುವ ಪ್ರಶ್ನೆಗಳಿಗೆ ಹೊಸದಾಗಿ ಸಂಪನ್ಮೂಲಗಳನ್ನು ಸೃಷ್ಟಿಸಬೇಕಿರುತ್ತದೆ. ಅದನ್ನು ಒಂದು ಶಾಲೆಗೆ ಹೊಂದುವಂತೆ ಮಾರ್ಪಡಿಸಿ ನೀಡಲಾಗುತ್ತಿದೆ.

**ಶಿಕ್ಷಕಿಯರ ಅಭಿಪ್ರಾಯ :**

ಈ ಸೆಶನ್‌ನ ವಿಷಯಗಳಿಗೆ ಕಿಶೋರಿಯರ ಸ್ಪಂದನೆ ಹೇಗಿತ್ತು? (ವಿವರಿಸಿ) ಎಂಬ ಪ್ರಶ್ನೆಗೆ, ಕೆಲ ಶಿಕ್ಷಕಿಯರ ಅನಿಸಿಕೆಗಳು ಹೀಗಿವೆ,

ಶಿಕ್ಷಕಿ 01 - Very good, all were attracted by the session

ಶಿಕ್ಷಕಿ 02 - ಲವಲವಿಕೆಯಿಂದ ಭಾಗಿಯಾಗಿದ್ದು ಕಂಡುಬಂತು

ಶಿಕ್ಷಕಿ 03 - ಸರಿಯಾಗಿತ್ತು.ಗೊತ್ತಿರದ ವಿಷಯ ತಿಳಿದುಕೊಂಡರು.

ಶಿಕ್ಷಕಿ 04 - ಉತ್ತಮವಾಗಿದ್ದು ಕೆಲವರು ಮುಕ್ತವಾಗಿ ಮಾತನಾಡಿದರು

ಶಿಕ್ಷಕಿ 05 - ಯಾವುದೋ ಒಂದು ಹೊಸ ವಿಚಾರ ನಮ್ಮ ಶಿಕ್ಷಕರು ಹೇಳುತ್ತಾರೆ ಎಂದು ಕುತೂಹಲದಿಂದ ನೋಡುತ್ತಿದ್ದರು

ಶಿಕ್ಷಕಿ 06 - ಇದರಿಂದ ಹೆಣ್ಣು ಮಕ್ಕಳಿಗೆ ತುಂಬಾ ಉಪಯೋಗವಾಗುತ್ತದೆ. ಹೆಣ್ಣು ಮಕ್ಕಳು ಹಾಗೂ ಗಂಡು ಮಕ್ಕಳ ಜೊತೆ ಹೇಗಿರಬೇಕೆಂದು ನೋಡಬಹುದು. ಗಂಡು ಮಕ್ಕಳಲ್ಲಿ ಬದಲಾವಣೆ ಆಗುವಂತಹ ವಿಷಯಗಳನ್ನು ತಿಳಿದುಕೊಂಡೆವು. ಮಾನಸಿಕ ಬೌದ್ಧಿಕ ಹಾಗೂ ದೈಹಿಕ ಬದಲಾವಣೆಗಳನ್ನು ತಿಳಿದುಕೊಳ್ಳಬಹುದು.

ಶಿಕ್ಷಕಿ 07 - ನಾನು ಜಗತ್ತಿನಲ್ಲಿ ಹೆಣ್ಣಾಗಿ ಹುಟ್ಟಿರುವುದು ತುಂಬಾನೇ ಖುಷಿ ಇದೆ. ಹೆಣ್ಣಿಗೆ ಬೇಕಾಗಿರುವ ವಿಷಯಗಳ ಬಗ್ಗೆ ತಿಳಿದುಕೊಂಡೆ. ಈ ಕಿಶೋರಿ ಕ್ಲಬ್ ನಿಂದ ತುಂಬಾ ಹೆಣ್ಣುಮಕ್ಕಳಿಗೆ ಸಹಾಯ ಆಗಿದೆ.

Thank you Kishori Club and Kishori Club teacher. Thank you

ಶಿಕ್ಷಕಿ 08 - ನಮಗೂ ಕೂಡ ಮಾರ್ಗದರ್ಶನ ದ ಅವಶ್ಯಕತೆ ಇತ್ತು.

ಶಿಕ್ಷಕಿ 09 - ಪುರುಷ ಪ್ರಧಾನ ಸಮಾಜ ಆಗಿದ್ದರಿಂದ ಗಂಡು ಮಕ್ಕಳು ಎಂದರೆ ಬಹಳ ಪ್ರೀತಿ, ಮುಂದೆ ನಮ್ಮನ್ನು ಸಾಕುತ್ತಾನೆ ಎನ್ನುವ ಆಸೆ, ಪ್ರತಿ ಕುಟುಂಬದಲ್ಲಿ ಒಂದಾದರೂ ಗಂಡು ಮಗು ಬೇಕು ಎಂದು ಬಯಸಿ ಭ್ರೂಣ ಹತ್ಯೆಗೆ ಮುಂದಾಗುತ್ತಾರೆ ಇದು ತಪ್ಪು ,ಹೆಣ್ಣು ಮಗು ಕೂಡ ತನ್ನ ತಂದೆ ತಾಯಿಯನ್ನು ಸಾಕುತ್ತಾಳೆ ಎನ್ನುವುದನ್ನು ಮನವರಿಕೆ ಮಾಡಿಕೊಡಬೇಕು.

ಇಲ್ಲಿ ಗಮನಿಸಬೇಕಿರುವ ಅಂಶಗಳೆಂದರೆ ಶಿಕ್ಷಕಿಯರಿಗೂ ಹಲವು ವಿಷಯಗಳು ಹೊಸದಾಗಿವೆ ಹಾಗು ಕಿಶೋರಿಯರ ಜೊತೆಗಿನ ಒಡನಾಟ ಅವರಿಗೆ ಹೊಸ ಹೊಳಹುಗಳನ್ನು ನೀಡುತ್ತಿದೆ.

ಕಾರ್ಯಕ್ರಮದ ಕುರಿತು ಶಿಕ್ಷಕಿಯೊಬ್ಬರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಅದನ್ನು ಈ ಲಿಂಕಿನಲ್ಲಿ ಕೇಳಬಹುದಾಗಿದೆ. on.soundcloud.com/BD89e

## ಚರ್ಚೆ ಮತ್ತು ಶಿಫಾರಸುಗಳು

ಇಲ್ಲಿ ಕಂಡುಬಂದಿರುವ ಕೆಲವು ಅಂಶಗಳೆಂದರೆ,

1. ಹಲವು ಶಿಕ್ಷಕಿಯರಿಗೆ ತಾಂತ್ರಿಕ ತೊಂದರೆಗಳಿವೆ. ಸರಿಯಾದ ಮೊಬೈಲ್ ನೆಟ್‌ವರ್ಕ್ ಹಾಗು ಇಂಟರ್ನೆಟ್ ವ್ಯವಸ್ಥೆ ಇಲ್ಲದಿರುವುದು, ಮೊಬೈಲ್ ಫೋನಿನಲ್ಲಿ ಖಾಲಿ ಜಾಗವಿಲ್ಲದಿರುವುದು ಇತ್ಯಾದಿ
2. ಕೆಲ ಶಾಲೆಗಳಲ್ಲಿ ಪ್ರೊಜೆಕ್ಟರ್ ವ್ಯವಸ್ಥೆ ಇದ್ದರೂ ಅವುಗಳು ಸರಿಯಾಗಿ ಕೆಲಸ ಮಾಡದ ಕಾರಣ ಡಿಜಿಟಲ್ ಕಥೆಗಳನ್ನು ತೋರಿಸಲು ಸವಾಲಾಗಿದೆ
3. ಕೆಲವು ಶಾಲೆಗಳಲ್ಲಿ ಮುಂಚೆ ಇದ್ದಂತಹ ಶಿಕ್ಷಕಿಯರು ವರ್ಗಾವಣೆಯಾಗಿರುವುದು ಕಿಶೋರಿ ಕ್ಲಬ್‌ಗಳ ನಿರಂತರತೆಗೆ ತೊಡಕಾಗಿದ್ದು, ಬದಲಿ ಶಿಕ್ಷಕಿಯರು ಹಾಗು ಹೊಸದಾಗಿ ಸೇರಿದ ಶಿಕ್ಷಕಿಯರ ಜೊತೆಗೆ ಎರಡನೇ ಸುತ್ತಿನ ಕಾರ್ಯಾಗಾರವನ್ನು ನಡೆಸಲಾಯಿತು. ಅವರೆಲ್ಲರೂ ಅವರವರ ಶಾಲೆಗಳಲ್ಲಿ ಕಿಶೋರಿ ಕ್ಲಬ್‌ಗಳನ್ನು ಕೈಗೆತ್ತಿಕೊಂಡು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ.
4. ಸಂಪನ್ಮೂಲಗಳನ್ನು ಆನ್‌ಲೈನ್ ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳಲು ಕೆಲವರಿಗೆ ಮೂಲಭೂತ ತಂತ್ರಜ್ಞಾನದ ಅಭ್ಯಾಸ ಬೇಕಿದೆ.

ಈ ಕಲಿಕೆಗಳ ಜೊತೆಗೆ ಮುಂದೆ ಕಿಶೋರಿ ಕ್ಲಬ್‌ಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಕೆಲವು ಶಿಫಾರಸುಗಳು ಚರ್ಚೆಯಲ್ಲಿ ಬಂದಿವೆ,

1. ಕಿಶೋರಿ ಕ್ಲಬ್‌ಗಳು ಶೈಕ್ಷಣಿಕ ವರ್ಷದ ಮೊದಲಿನಿಂದಲೂ ಶಾಲೆಯ ಯೋಜನೆಯಲ್ಲಿರಬೇಕು. ಶಾಲೆಗಳಲ್ಲಿ ಹಲವು ಕ್ಲಬ್‌ಗಳು ಹಾಗು ಚಟುವಟಿಕೆಗಳು ನಿರಂತರವಾಗಿ ನಡೆಯುವುದರಿಂದ ಈ ಕ್ಲಬ್‌ಗಳನ್ನು ಮೊದಲೇ ಶಾಲಾ ಅವಧಿಗಳಲ್ಲಿ ಹೊಂದಿಸಬೇಕಿದೆ.
2. ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಈ ಕ್ಲಬ್‌ಗಳು ರಾಜ್ಯದ ಎಲ್ಲಾ ಜಿಲ್ಲೆಗಳ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ನಡೆಯಬೇಕೆಂದರೆ ಶಿಕ್ಷಕರು ಹಾಗು ಶಿಕ್ಷಕಿಯರ ಸಹಕಾರ ಅತ್ಯಗತ್ಯ. ಆದ್ದರಿಂದ ಅವರಿಗೆ ನೆರವು ನೀಡುವಂತಹ ಕಾರ್ಯಗಾರಗಳನ್ನು ವರ್ಷದ ಆರಂಭದಲ್ಲಿ ನಡೆಸಿದರೆ, ಶಾಲಾ ಪಠ್ಯ ಬೋಧನೆಗೆ ತೊಂದರೆಯಾಗದಂತೆ ನಡೆಸಿಕೊಂಡು ಹೋಗಬಹುದಾಗಿದೆ.
3. ಹಲವು ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿರುವುದರಿಂದ ಶಾಲೆಗಳಲ್ಲಿ ಕಿಶೋರಿಯರ ಗೈರು ಹಾಜರಿ ಹೆಚ್ಚಾಗಿದೆ. ಅವುಗಳನ್ನು ಪೂರೈಸುವ ಮೂಲಕ ಶಾಲಾ ಹಾಜರಾತಿಯನ್ನು ಹೆಚ್ಚಿಸಬಹುದಾಗಿದೆ.
4. ಲೈಂಗಿಕ ಕಿರುಕುಳ ಹಾಗು ಪೋಕ್ಸೋ ಕಾಯ್ದೆಯ ನ್ಯಾಯಬದ್ಧ ವರದಿ ಹಾಗು ಕ್ರಮಗಳು ಜರುಗಬೇಕೆಂದರೆ, ಮಕ್ಕಳಿಗೆ ಕಾಯ್ದೆಯ ಬಗ್ಗೆ ಮಾಹಿತಿ ಮಾತ್ರವಲ್ಲ, ಅವರಿಗೆ ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಸಬಲ ವ್ಯವಸ್ಥೆಯ ಅಗತ್ಯವಿದೆ. ಶಾಲೆಯ ಶಿಕ್ಷಕರು, ಸಿಬ್ಬಂದಿ, ಮನೆಯಲ್ಲಿ ಪೋಷಕರು, ಸಂಬಂಧಿಗಳು ಹಾಗು ಪೋಲಿಸ್ ಒಳಗೊಂಡಂತೆ ಒಂದು ಬೆಂಬಲದ ಗುಂಪು ತಮ್ಮೊಟ್ಟಿಗೆ ಸದಾಕಾಲ ಕೆಲಸ ಮಾಡುತ್ತಿದೆ ಎನ್ನುವ ನಂಬಿಕೆ ಹೆಣ್ಣುಮಕ್ಕಳಲ್ಲಿ ಹೆಚ್ಚು ಧೈರ್ಯವನ್ನು ತುಂಬುತ್ತದೆ.

ಕಿಶೋರಿ ಕ್ಲಬ್‌ಗಳನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗಲು ಶಿಕ್ಷಣ ಇಲಾಖೆಯ ನೆರವು ಹೀಗೆಯೇ ಮುಂದುವರೆಯುವುದು ಮುಖ್ಯವಾದ ವಿಷಯ. ಅತಿ ಸುಲಭವಾಗಿ ಅರ್ಥವಾಗುವಂತೆ ರೂಪಿಸಿದ ಸಂಪನ್ಮೂಲಗಳು, ಕಠಿಣವಾದ ವಿಷಯಗಳನ್ನು ಶಿಕ್ಷಕರು ಸುಲಭವಾಗಿ ಚರ್ಚಿಸಲು ಸಾಧ್ಯಮಾಡುವುದು ಈ ಕಾರ್ಯಕ್ರಮವನ್ನು ಸುಲಭವಾಗಿ ಎಲ್ಲಾ ಜಿಲ್ಲೆಗಳಲ್ಲಿ ಆರಂಭಿಸಲು ಅನುವು ಮಾಡಿಕೊಡುತ್ತವೆ.

ಕರ್ನಾಟಕದ ಎಲ್ಲಾ ಪ್ರೌಢಶಾಲೆಗಳಲ್ಲಿ ಕಿಶೋರಿ ಕ್ಲಬ್‌ಗಳು ನಡೆಯಬೇಕಿದೆ. ಉತ್ಸುಕತೆಯಿಂದ ಆರಂಭಗೊಂಡು ಹೆಚ್ಚೆಚ್ಚು ಹೆಣ್ಣುಮಕ್ಕಳ ಅಚ್ಚುಮೆಚ್ಚಾಗಿರುವ ಈ ಕ್ಲಬ್‌ಗಳು ಮುಂದೆ ಶಾಲೆಯಿಂದ ಹೊರಗುಳಿದ, ಬಾಲ್ಯವಿವಾಹದಂತಹ ಹಾಗು ಲೈಂಗಿಕ ಕಿರುಕುಳದಂತಹ ಸಮಸ್ಯೆಗಳಿಗೆ ಸಿಲುಕುವ ಹೆಣ್ಣುಮಕ್ಕಳಿಗೆ ಮುಕ್ತವಾಗಿ ಮಾತನಾಡಲು, ಶಾಲಾ ವಾತಾವರಣದಲ್ಲೇ ಆಪ್ತ ಶಿಕ್ಷಕಿಯರೊಂದಿಗೆ ಕುಳಿತು ತಮ್ಮ ಮುಂದಿನ ಭವಿಷ್ಯದ ಕನಸುಗಳನ್ನು ಹೆಣೆಯಲು ಉತ್ತಮ ಜಾಗಗಳಾಗುತ್ತವೆ.

# ಉಲ್ಲೇಖಗಳು


1. Azhari, Atiqah, Zoe Toms, Georgia Pavlopoulou, Gianluca Esposito, and Dagmara Dimitriou. "Social Media Use in Female Adolescents: Associations with Anxiety, Loneliness, and Sleep Disturbances." *Acta Psychologica* 229 (September 2022): 103706. https://doi.org/10.1016/j.actpsy.2022.103706.
2. Guariso, Andrea, and Martina Björkman Nyqvist. "The Impact of the COVID-19 Pandemic on Children's Learning and Wellbeing: Evidence from India." *Journal of Development Economics* 164 (September 2023): 103133. https://doi.org/10.1016/j.jdeveco.2023.103133.
3. Hanagodimath, Shiddalingaswami. "Implementation of D. M. Nanjundappa Committee Recommendations for Redressal of Regional Imbalance," December 16, 2010.
4. Kasinathan, Gurumurthy. "Professional Learning Communities, an ICT Integrated Model of in-Service Teacher Education," n.d.
5. Maity, Shrabanti, and Pronobesh Ranjan Chakraborty. "Implications of the POCSO Act and Determinants of Child Sexual Abuse in India: Insights at the State Level." *Humanities and Social Sciences Communications* 10, no. 1 (January 3, 2023): 1–13. https://doi.org/10.1057/s41599-022-01469-x.
6. Mallik, Lakshmi, and Dr Vineeta. "Kishori Awareness Program-Reflections of the Teacher-Resource Persons" 5 (July 3, 2017): 40–46.
7. Maradi, Vani. "Implementation of Article 371(J) Enhance the Economic and Education Status of the Kalyan- Karnataka Region," n.d.
8. Mehra, Devika, Theophilus Lakiang, Nishtha Kathuria, Manish Kumar, Sunil Mehra, and Shantanu Sharma. "Mental Health Interventions among Adolescents in India: A Scoping Review." *Healthcare* 10, no. 2 (February 10, 2022): 337. https://doi.org/10.3390/healthcare10020337.
9. Para, Praveen B. "POCSO Cases on the Rise in Kalaburagi District." *The Hindu*, August 4, 2023, sec. Karnataka. https://www.thehindu.com/news/national/karnataka/pocso-cases-on-the-rise-in-kalaburagi-district/article67158918.ece.
10. Shiddalingaswami H, V.K. Raghavendra. "Regional Disparities in Karnataka: A District Level Analysis of Growth and Development," 2010.

11. SiNgh, Vijay. “IMPACT OF SOCIAL MEDIA ON SOCIAL LIFE OF TEENAGERS IN INDIA: A CASE STUDY.” *Journal of Academic Perspective on Social Studies*, no. 1 (April 1, 2019): 13–24. https://doi.org/10.35344/japss.529285.
12. The Indian Express. “Child Marriages in Karnataka Rose by 300% in 5 Years, Shows Govt Data,” September 14, 2022. https://indianexpress.com/article/cities/bangalore/child-marriages-in-karnataka-rose-by-300-in-5-years-shows-govt-data-8149838/.
13. The New Indian Express. “Child Sexual Abuse: 6,160 POCSO Cases in Karnataka between 2018 and ’22; Bengaluru Recorded 444 Cases in 2022,” 2023. https://www.newindianexpress.com/states/karnataka/2023/nov/25/child-sexual-abuse6160-pocso-cases-in-karnataka-between-2018-and-22-bengaluru-recorded-444-cases-in-2022-2635976.html.
14. Yazar, Tarik, and Gokce Arifoglu. “A Research of Audio Visual Educational Aids on the Creativity Levels of 4-14 Year Old Children as a Process in Primary Education.” *Procedia - Social and Behavioral Sciences* 51 (2012): 301–6. https://doi.org/10.1016/j.sbspro.2012.08.163.